ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	814(1043)
ಉತ್ತರಿಸುವ ದಿನಾಂಕ	10-03-2021
ಮಾನ್ಯ ಸದಸ್ಯರ ಹೆಸರು	ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಎಷ್ಟು ಉಪನೋಂಣಾಧಿಕಾರಿ ಕಛೇರಿಗಳಿವೆ:	ರಾಜ್ಯದಲ್ಲಿ ಒಟ್ಟು 252 ಉಪನೋಂದಣಿ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುತ್ತದೆ.
ಆ)	ಆಸ್ತಿ ನೋಂದಣಿಗಾಗಿ ಆನ್‌ಲೈನ್ ವ್ಯವಸ್ಥೆ ಜಾರಿಗೊಳಿಸಿದ್ದು, ಸರ್ವರ್ ಸಮಸ್ಯೆಯಿಂದ ಆಸ್ತಿ ನೋಂದಣಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು ಬಂದಿರುತ್ತದೆ.
ಇ)	ಬಂದಿದ್ದಲ್ಲಿ ಸರ್ಕಾರಕ್ಕೆ ರಾಜಸ್ವ ತಂದು ಕೊಡುವ ಈ ಇಲಾಖೆಯನ್ನು ತಾಂತ್ರಿಕವಾಗಿ ಸಬಲಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:	ಸರ್ವರ್ ಸಮಸ್ಯೆಯಿಂದ ಕೆಲವೊಮ್ಮೆ ದಸ್ತಾವೇಜು ನೋಂದಣಿಯು ವಿಳಂಬವಾಗುತ್ತಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕಾವೇರಿ ತಂತ್ರಾಂಶವನ್ನು 2008ರಲ್ಲಿ ಭೂಮಿ ತಂತ್ರಾಂಶದೊಂದಿಗೆ, 2014ರಲ್ಲಿ ಇ-ಸ್ವತ್ತು ತಂತ್ರಾಂಶದೊಂದಿಗೆ, 2019ರಲ್ಲಿ ಇ-ಆಸ್ತಿ ತಂತ್ರಾಂಶದೊಂದಿಗೆ,2020ರಲ್ಲಿ ಬಿಡಿಎ ಹಾಗೂ ಬಿಬಿಎಂಪಿ ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿದ್ದು, ಇದರಿಂದಾಗಿ ಸರ್ವರ್‌ಗೆ ಹೆಚ್ಚುವರಿ ಒತ್ತಡ ಇರುತ್ತದೆ. ಸಂಯೋಜನೆಯಾಗಿರುವ ಇತರೆ ಇಲಾಖೆಯ ತಂತ್ರಾಂಶದಲ್ಲಿ ಯಾವುದೇ ಸಮಸ್ಯೆ ಉಂಟಾದಲ್ಲಿ ಅದು ಕಾವೇರಿ ತಂತ್ರಾಂಶದಲ್ಲಿ ಪ್ರತಿಬಿಂಬಿಸಿ ನೋಂದಣಿಗೆ ತೊಂದರೆಯಾಗುತ್ತದೆ. ಉದಾಹರಣೆಗೆ ದಿನಾಂಕ: 08-03-2021 ರಂದು ಓ.ಟಿ.ಪಿ ಸಮಸ್ಯೆ ಉಂಟಾಗಿದ್ದು, ಇದು ಕಾವೇರಿ ತಂತ್ರಾಂಶದ ಸಮಸ್ಯೆ ಆಗಿರುವುದಿಲ್ಲ. ಇದು e-Governance ಇಲಾಖೆಯ ಅಡಿ ಬರುವ Directorate of Electronic Delivery of Citizen Services (EDCS)ರವರ SMS ಸೇವೆಯಲ್ಲಿನ ಸಮಸ್ಯೆಯಾಗಿರುತ್ತದೆ. ಸದರಿ ದಿನದಂದು ಸುಮಾರು 5 ಗಂಟೆಯವರೆಗೆ ಇತರೆ ಇಲಾಖೆಯೊಂದಿಗೆ ಸಂಪರ್ಕಿಸಿ, ಸಮಸ್ಯೆ ಪರಿಹರಿಸಿ, ನೋಂದಣಿ ಪ್ರಾರಂಭಿಸಲಾಗಿರುತ್ತದೆ.

. . . 2

ಕ್ರ. ಸಂ.	ಪ್ರಶ್ನೆ	ಉತ್ತರ
		ಉಪನೋಂದಣಿ ಕಛೇರಿಗಳಲ್ಲಿರುವ ಯುಪಿಎಸ್ ಮತ್ತು ಬ್ಯಾಟರಿಗಳು 07 ವರ್ಷ ಹಳೆಯದಾಗಿದ್ದು, ಇವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ಇರುವುದರಿಂದ ಕೆಲವೊಮ್ಮೆ ಸರ್ವರ್‌ಗಳು **abrupt shutdown** ಗೆ ಒಳಗಾಗಿ ಡೇಟಾಬೇಸ್ ಕ್ರಾಶ್ ಆಗುತ್ತದೆ. ಉಪನೋಂದಣಿ ಕಛೇರಿಗಳಿಗೆ ಹೊಸ ಯುಪಿಎಸ್ ಮತ್ತು ಬ್ಯಾಟರಿಗಳನ್ನು ಖರೀದಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 04-03-2021 ರಂದು ಟೆಂಡರ್ ಪ್ರಕಟಿಸಲಾಗಿರುತ್ತದೆ.
ಈ)	ಹೆಚ್ಚು ಒತ್ತಡ ಇರುವ ಉಪನೋಂದಣಿ ಕಛೇರಿಗಳಲ್ಲಿ ಹೆಚ್ಚುವರಿ ಕಛೇರಿಗಳನ್ನು ತೆರೆದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	ಮೈಸೂರು ನಗರದಲ್ಲಿ ಈಗಾಗಲೇ ನಾಲ್ಕು ಉಪನೋಂದಣಿ ಕಛೇರಿಗಳು ಹಾಗೂ ಹುಬ್ಬಳ್ಳಿ ನಗರದಲ್ಲಿ ಎರಡು ಉಪನೋಂದಣಿ ಕಛೇರಿಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಬೆಳಗಾವಿ ಮತ್ತು ತುಮಕೂರು ನಗರಗಳಲ್ಲಿ ಹಾಲಿ ಒಂದು ಉಪನೋಂದಣಿ ಕಛೇರಿಯಿದ್ದು, ಇನ್ನೊಂದು ಉಪನೋಂದಣಿ ಕಛೇರಿಯನ್ನು ತೆರೆಯಲು ಸರ್ಕಾರವು ಅನುಮತಿ ನೀಡಿದ್ದು, ಸದರಿ ಕಛೇರಿಗಳನ್ನು ಶೀಘ್ರದಲ್ಲೇ ಪ್ರಾರಂಭಿಸಲಾಗುತ್ತದೆ.

ಸಂಖ್ಯೆ: ಕಂಇ/125/ಎಂಎನ್ಎಸ್ಎ/2021

(ಆರ್.ಅಶೋಕ್)
ಕಂದಾಯ ಸಚಿವರು